

# ಬದುಕಿನ ತಿರುವಿನಲ್ಲಿ ಎದುರಾದ ಹೊಸ ನೈಟಿಂಗೇಲ್!

ಮೊಮ್ಮಗನ ಮದುವೆಯ ಬಗ್ಗೆ ವಿಚಾರಿಸಲು ಹೋದ ಗುನ್ನಾಲಾಲ್‌ಗೆ, ಜಿಎಸ್‌ಟಿ ಅಧಿಕಾರಿಗಳಿಂದ ಎದುರಾದ ತೊಂದರೆಯನ್ನು ಕುಳಿತಲ್ಲೇ ಪರಿಹರಿಸಿಕೊಟ್ಟ ಸಂದೀಪ್ ಕೊಚಾರನ್ ಶಕ್ತಿಯನ್ನು ಕಂಡು ಅಚ್ಚರಿಯಾಯಿತು. ಹೊರಟು ನಿಂತು, 'ಗುರೂಜಿ, ನಿಮ್ಮಿಂದ ತುಂಬಾನೆ ಅನುಕೂಲವಾಯಿತು. ತಾವು ಏನು ಹೇಳುವಿರೋ ಅದಕ್ಕೆ ನಾನು ಬದ್ಧನಾಗಿರುತ್ತೇನೆ. ಮುಂದಿನ ವಾರ ಕಮಿಷನರ್ ಸಾಹೇಬರೊಂದಿಗೆ ಭೇಟಿಗೆ ಫಿಕ್ಸ್ ಮಾಡಿ. ನನ್ನ ಮಗ ಭವರ್ ಲಾಲನನ್ನೂ ಜೊತೆಯಲ್ಲಿ ಕರೆತರುತ್ತೇನೆ. ಇನ್ನು ಭಜನ್ ಲಾಲ್ ಪುರಾನೆವಾಲೆಯ ಮಗಳ ಮತ್ತು ನನ್ನ ಮೊಮ್ಮಗನ ಗ್ರಹಗತಿಗಳ ಬಗ್ಗೆ ಇನ್ನೊಮ್ಮೆ ನೋಡಿದರಾಯಿತು. ನೀವು ಏರ್‌ಪೋರ್ಟ್ ಕಡೆ ಪ್ರಯಾಣ ಬೇರೆ ಬೆಳೆಸಬೇಕು' ಎಂದು ಚೇಂಬರಿನಿಂದ ಹೊರನಡೆದಿದ್ದ.

ಕಾರಿನಲ್ಲಿ ಕುಳಿತುಕೊಳ್ಳುವ ಹೊತ್ತಿಗೆ ಫೋನ್ ರಿಂಗ್ ಆಗಿತ್ತು. ಆ ಕಡೆಯಿಂದ 'ಪಪ್ಪಾ, ಜಿಎಸ್‌ಟಿ ಅಧಿಕಾರಿಗಳಿಗೆ ಅವರ ಕಮಿಷನರವರಿಂದ ಫೋನ್ ಬಂದಿತ್ತು. ಒಂದು ಸಿಂಪಲ್ ಸ್ಟೇಟ್‌ಮೆಂಟ್‌ಗೆ ಸೈನ್ ಹಾಕಿಸಿಕೊಂಡು ಹೋದರು. ಹದಿನೈದು ದಿನಗಳಲ್ಲಿ ಲೆಕ್ಕದ ಪುಸ್ತಕಗಳನ್ನು ಜಾಯಿಂಟ್ ಕಮಿಷನರ್ ಮುಂದೆ ಹಾಜರುಪಡಿಸಲು ಸ್ಟೇಟ್‌ಮೆಂಟ್‌ನಲ್ಲಿ ಬರೆದಿದ್ದಾರೆ. ನನಗೆ ನಿಜಕ್ಕೂ ಅಚ್ಚರಿಯಾಯ್ತು. ಇಂಟರ್ ಸ್ಟೇಟ್ ಮಾರಾಟವನ್ನು ತಪ್ಪಾಗಿ ನಾವು ರಫ್ತು ಮಾರಾಟವೆಂದು ನಮ್ಮ ರಿಟರ್ನ್ಸ್‌ನಲ್ಲಿ ಫೈಲ್ ಮಾಡಿರುವುದು ಮೇಲ್ನೋಟಕ್ಕೆ ನನಗೆ ಗೊತ್ತಾಗಿದೆ. ಲಯಬಿಲಿಟಿ ಬಂದರೆ ಕಟ್ಟಿಬಿಡೋಣ ಪಪ್ಪಾ, ತಾಪತ್ರಯವೇ ಬೇಡ' ಎಂದು ಖುಷಿಯಿಂದಲೇ ಮಾತನಾಡಿದ್ದ. ಜಿಎಸ್‌ಟಿ ಅಧಿಕಾರಿಗಳು ಹಿಂತಿರುಗಿ ಹೋದರೆಂಬ ಸುದ್ದಿ ಕೇಳಿ ಹರ್ಷವರ್ಧನ್ ಶಿಲೋಡ್ಕರನಿಗೆ ತುಂಬಾ ಖುಷಿಯಾಗಿತ್ತು. ಅವರು ಹಿಂತಿರುಗಿ ಹೋಗಲು ಸಂದೀಪ್ ಕೊಚಾರ್ ಕಾರಣವೆಂದು ಸೂಕ್ಷ್ಮ ಬುದ್ಧಿಯವನಾದ ಅವನಿಗೆ ತಿಳಿದಿತ್ತು. ಕೆಲವು ರಹಸ್ಯವಾದ ವಿಷಯಗಳನ್ನು ಯಾರಿಗೂ ತಿಳಿಸಬಾರದೆಂದು ಗುನ್ನಾಲಾಲ್ ಅವನಿಗೆ ತಿಳಿಹೇಳಬೇಕಾಗಿರಲಿಲ್ಲ. ಗುನ್ನಾಲಾಲನಿಗೆ ಶಿರೋಡ್ಕರ್ ಅಷ್ಟೊಂದು ನಂಬಿಕಸ್ಥನಾಗಿದ್ದ, ಪ್ರಾಮಾಣಿಕನಾಗಿದ್ದ. ಕಾರಿನಲ್ಲಿ ಹೋಗುತ್ತಿರುವಾಗಲೇ ಗುನ್ನಾಲಾಲನು ಭಜನ್ ಲಾಲ್ ಪುರಾನೆವಾಲೆಯ ಮಗಳಾದ ಸಾಯಿಪ್ರಭೆಯನ್ನು ತನ್ನ ಮೊಮ್ಮಗ ಆಸ್ಕರ್ ವೈಲ್ಡನಿಗೆ ತಂದುಕೊಳ್ಳಬಾರದೆಂದು ನಿರ್ಧರಿಸಿಬಿಟ್ಟ. ಮತ್ತು ಆ ಕ್ಷಣ ನಿರಾಳನಾಗಿಯೂಬಿಟ್ಟ.

ಮನೆಯಲ್ಲಿ ಹೆಂಡತಿ, ಸೊಸೆಯರಿಗೆ ಹೇಗೆ ಕನ್ವಿನ್ಸ್ ಮಾಡಬೇಕೆಂಬುದರ ಬಗ್ಗೆ ಆಲೋಚನೆಗೆ ಬಿದ್ದ. ಆಸ್ಕರ್ ವೈಲ್ಡನಿಗೇನಾದರೂ ಸಾಯಿಪ್ರಭೆ ತುಂಬಾ ಇಷ್ಟವಾಗಿದ್ದಲ್ಲಿ ಅವನನ್ನು ಅವಳ ಗುಂಗಿನಿಂದ ಹೇಗೆ ಹೊರತರಬೇಕೆಂಬ ಚಿಂತೆಯೂ ಕ್ಷಣ ಅವನ ಮನದಲ್ಲಿ ಇಣುಕಿತ್ತು. ಗುನ್ನಾಲಾಲನ ಮನದಲ್ಲಿ ನಡೆದಿದ್ದ ಹೊಯ್ದಾಟದ ತರಂಗಗಳು ಹರ್ಷವರ್ಧನ್ ಶಿರೋಡ್ಕರನ ಮೆದುಳಿನ ಅಕ್ಕಪಕ್ಕ ಸುಳಿದಾಡಿದ್ದವು. ಶಿರೋಡ್ಕರ್ 'ಚಾಚ, ನಿಮ್ಮ ಮಾತನ್ನು ಮನೆಯಲ್ಲಿ ಯಾರೂ ತೆಗೆದುಹಾಕಲಾರರು. ಈ ವಿಷಯದಲ್ಲಿ ಅಂಥ ತಿಕ್ಕಾಟವಾಗದೆಂದು ನನ್ನ ಮನಸ್ಸು ಹೇಳುತ್ತಿದೆ. ನೀವು ಮಾತ್ರ ಆ ಬಗ್ಗೆ ತೀರಾ ಮನಸ್ಸು ಕೆಡಿಸಿಕೊಳ್ಳಬೇಡಿ. ಅಂಥ ಸಂದರ್ಭ ಬಂದರೆ ಏನಾದರೊಂದು ಉಪಾಯ ಹುಡುಕಿದರಾಯಿತು' ಎಂದು ಮೆಲುಧ್ವನಿಯಲ್ಲಿ ಹೇಳಿದ್ದ.

ಗುನ್ನಾಲಾಲನಿಗೆ ಹೃದಯ ತುಂಬಿಬಂದಿತ್ತು. ಜಿಎಸ್‌ಟಿ